ದಿವಸಗಳಿಂದ ಸಾಕಷ್ಟು ಚರ್ಚೆಯಾಗಿದೆ. ಈಗ ಅದಕ್ಕೆ ರೈತ ಸಂಘದವರು ಶ್ರೀಮಾನ್ ವಾಟಾಳ್ ನಾಗರಾಜ್ ರವರು, ಕಮರುಲ್ ಇಸ್ಲಾಂರವರು ಮತ್ತು ಬಿಜೆಪಿ ಸದಸ್ಯರು ಸಹಾ ಸದನದ ಸಮಿತಿಯನ್ನು ಮಾಡಿ ಅಲ್ಲಿಂದ ವರದಿ ಬಂದ ನಂತರ ನ್ಯಾಯಾಂಗ ತನಿಖೆ ಮಾಡಬೇಕೋ ಬಿಡಬೇಕೋ ಎನ್ನುವ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ. ತಾವು ಅದಕ್ಕೆ ಒಪ್ಪಿಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಮುಂದಿನ ಕಲಾಪವನ್ನು ನಡೆಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿ ನಾನು ತಮ್ಮಲ್ಲಿ ಬಹಳ ಆತ್ಮೀಯತೆಯಿಂದ ಕೇಳಿಕೊಳ್ಳುತ್ತೇನೆ.

(ನ್ಯಾಯಾಂಗ ತನಿಖೆ ಬೇಕೆ ಬೇಕು ಎಂದು ಜನತಾ ದಳದ ಸದಸ್ಯರು ಬಾವಿಯಲ್ಲಿ ನಿಂತು ಕೂಗುತ್ತಿದ್ದರು)

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಬೇಕು ಎಂದು ವಿನಂತಿಸಿಕೊಂಡಿದ್ದೇನು. ಆದರೆ ಅವರುಗಳು ನನ್ನ ಮನವಿಗೆ ಪುರಸ್ಕಾರ ಕೊಡದೆ ನನ್ನ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ, ಉದ್ದೇಶ ಪೂರ್ವಕವಾಗಿ ಅಡಚಣೆಯನ್ನು ಉಂಟು ಮಾಡುತ್ತಿದ್ದಾರೆ. ಆದುದರಿಂದ ನಿಯಮ 331 ಮೇರೆಗೆ ಈ ಕೆಳಕಂಡ ಸದಸ್ಯರು ಸಭೆಯ ಕಲಾಪಗಳಿಗೆ ಸತತವಾಗಿ ಅಡ್ಡಿಪಡಿಸಿದ್ದಕ್ಕಾಗಿ ಈ ಸಭೆಯ ಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ನಾನು ಈ ಕೆಳಕಂಡ ಮಾನ್ಯ ಸದಸ್ಯರನ್ನು ಹೆಸರಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ

ಶ್ರೀ ಡಿ.ಬಿ. ಚಂದ್ರೇಗೌಡ

ಶ್ರೀ ಬಿ.ಹಂಪನಗೌಡ

ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ

ಶ್ರೀ ಹೆಚ್.ವಿಕಾಂತಯ್ಯನವರು

ಶ್ರೀ ಶಿವಾನಂದ ಕೌಜಲಗಿ

ಶ್ರೀ ಉಮೇಶ್ ಕತ್ತಿ

ಶ್ರೀ ವೈ.ಕೆ.ರಾಮಯ್ಯ

ಶ್ರೀ ಪಟ್ಟಣಶೆಟ್ಟಿ

ಶ್ರೀ ಪಿ.ಸಿ.ಸಿದ್ಧನಗೌಡರ್

ಶ್ರೀ ಆರ್.ಎಲ್.ಜಾಲಪ್ಪ

ಶ್ರೀ ಸಿ.ಭೈರೇಗೌಡ

ಶ್ರೀ ಬಿ.ಹೆಚ್.ಬನ್ನಿಕೋಡ್

ಶ್ರೀ ಪಾಟೀಲ್

(ಗೊಂದಲ)

(ನ್ಯಾಯಾಂಗ ತನಿಖೆ ಆಗಲೇ ಬೇಕು ಎಂದು ಜನತಾ ದಳದ ಸದಸ್ಯರುಗಳು ಒಕ್ಕೊರಲಿನಿಂದ ಬಾವಿಯಲ್ಲಿ ನಿಂತು ಕೂಗುತ್ತಿದ್ದರು)